ಮಾದರಿ ಪ್ರಶ್ನೆ ಪತ್ರಿಕೆ -1

**CCE RF**
**CCE RR**

ಸಂಕೇತ ಸಂಖ್ಯೆ : 01-K ವಿಷಯ : ಪ್ರಥಮ ಭಾಷೆ — ಕನ್ನಡ

Code No. : 01-K Subject : First Language — KANNADA

(ಹೊಸ ಪಠ್ಯಕ್ರಮ / New Syllabus)

**ಅಂಕಗಳು : 100** **10ನೇ ತರಗತಿ** **ಸಮಯ: 3 ಗಂಟೆ**

---

ಭಾಗ – 'ಎ'

<u>ಪಠ್ಯಗಳ ಅಧ್ಯಯನ ( ಗದ್ಯ,ಪದ್ಯ,ಪೋಷಕ ಅಧ್ಯಯನ) 67 ಅಂಕಗಳು</u>

**ಅ. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **9x1=9**

1. ರಾಮ ಲಕ್ಷ್ಮಣರಿಗೆ ಮಂತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
2. ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ ಏನು?
3. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರು ಯಾರೊಳಗೆ ಸಂವಾದ ನಡೆಯಿತು?
4. ಅಶೋಕ್ ಪೈರವರ ವೃತ್ತಿ ಯಾವುದು?
5. ಭಗವದ್ಗೀತೆಯನ್ನು ರಚಿಸಿದವರು ಯಾರು?
6. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?
7. ಯಾವುದನ್ನು ಎಚ್ಚರದಲ್ಲಿ ನಡೆಸಬೇಕು?
8. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗಬಯಸಿದ್ದಾರೆ?
9. ಮುದ್ದು ಪಾರಿವಾಳಗಳ ಸಂತಸಕ್ಕೆ ಕಾರಣವೇನು?

**ಆ. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:** **10x2=20**

10. ಕಲೋಪಾಸಕನ ಕರ್ತವ್ಯವೇನು?
11. ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?
12. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು?
13. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?
14. ಮಾತಿನ ಮಹತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?
15. ಗಡಿ ಆಚೆ ಈಚೆ ಜೀವಗಳು ಏಕೆ ಶವವಾದವು?
16. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?
17. ಪಂಪನು ತನ್ನ ಹೆಸರನ್ನು ಏಕೆ ಕೆತ್ರಿಸಲಿಲ್ಲ
18. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
19. ಕೊಕ್ಕರೆ ಎಂಬ ಉತ್ತರ ಬರುವ ಒಗಟನ್ನು ಬರೆಯಿರಿ.

Use E-Papers, Save Trees
above line hide when print out

**ಇ. ಈ ಕೆಳಗಿನ ಪ್ರತಿಯೊಂದು ಹೇಳಿಕೆಗಳ ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ:** **4x3=12**

20. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು"

21. "ದೇವರೇ, ಮರ ಹತ್ತುವಷ್ಟು ಅವಕಾಶ ಕಲ್ಪಿಸು"

22. ಕೆಟ್ಟು ವರ್ಣಿಸಿ ಕೇಳಿದೆ ಕಂಡಷ್ಟು"

23. "ಅರಸುಗಳ ವಾಜಿಯಂ ಬಿಡು"

**ಈ. ಈ ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ ಮತ್ತು ಕೃತಿಗಳನ್ನು ವಾಕ್ಯರೂಪದಲ್ಲಿ ಪರಿಚಯಿಸಿ:** **2x3=6**

24. ಪು.ತಿ.ನ

25. ಜಿ.ಎಸ್.ಶಿವರುದ್ರಪ್ಪ

**ಉ. 26. ಈ ಕೆಳಗಿನ ಪದ್ಯಗಳಲ್ಲಿ ಯಾವುದಾದರೊಂದನ್ನು ಪೂರ್ಣಗೊಳಿಸಿ:** **1x4=4**

ನೀಲ ಮೇಘ ಮಂಡಲ __________

______________________________

______________________________

______________________________

ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗಯುಗಗಳ __________________

______________________________

______________________________

______________________________

ಹಕ್ಕಿ ಹಾರುತಿದೆ ನೋಡಿದಿರಾ?

**ಊ. 27 ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಅದರ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:** **1x4=4**

ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು

**ಋ. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **2x4=8**

28. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು? ವಿವರಿಸಿ

**ಅಥವಾ**

ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿಕೊಂಡರು?

29. ಧೃತರಾಷ್ಟ್ರನು ಸಂಧಿ ಮಾಡಿಕೋ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು?

**ಅಥವಾ**

ದುರ್ಯೋಧನನ ತಂದೆ ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

**ಎ. 30. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **2x2=4**

ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು.

ಹಾಸನ ಜಿಲ್ಲಾ ಅರಸೀಕೆರೆ ತಾ ಕನ್ನಡ ಶಿಕ್ಷಕರ ವೇದಿಕೆ

Use E-Papers, Save Trees
above line hide when print out

ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳಿದರು. ಬೆಳಗ್ಗೆ ಪ್ರಯೋಗಾಲಯಕ್ಕೆ ಬಂದ ಮೇಲೆ ಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೆ ಭೇಟಿ ಇತ್ತು ಪ್ರತಿಯೊಬ್ಬ ಶಿಷ್ಯನು ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವನ್ನು ಬಯಲಿಗೆ ತಂದಿದ್ದನೆಂದರೆ ಬೆನ್ನು ತಟ್ಟಿ ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿ ಹೋಗುತ್ತಿದ್ದನು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು. **ಪ್ರಶ್ನೆಗಳು:** ಎ) ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವ ಹೇಗಿತ್ತು?

ಬಿ) ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

## ಭಾಗ-'ಬಿ'

## ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು – 20 ಅಂಕಗಳು

**ಏ. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ:** **10x1=10**

31. 'ಉಪಾರ್ಜಿಸು' ಪದದ ಅರ್ಥ

ಎ) ತ್ಯಜಿಸು ಬಿ) ಸಂಪಾದಿಸು ಸಿ) ತಿರಸ್ಕರಿಸು ಡಿ) ಉಪೇಕ್ಷಿಸು

32. ಅನುಸ್ವಾರ, ವಿಸರ್ಗಗಳನ್ನು __________ ಎಂದು ಕರೆಯುತ್ತಾರೆ.

ಎ) ಅಲ್ಪಪ್ರಾಣಾಕ್ಷರಗಳು ಬಿ) ಮಹಾಪ್ರಾಣಾಕ್ಷರಗಳು ಸಿ) ಅನುನಾಸಿಕಗಳು ಡಿ) ಯೋಗವಾಹಗಳು

33. 'ತುತ್ತತುದಿ' ಇದು ಈ ವ್ಯಾಕರಣಾಂಶಕ್ಕೆ ಸೇರಿದೆ.

ಎ) ನುಡಿಗಟ್ಟು ಬಿ) ದ್ವಿರುಕ್ತಿ ಸಿ) ಜೋಡುನುಡಿ ಡಿ) ಅನುಕರಣಾವ್ಯಯ

34. 'ಸನ್ಮಾನ' ಈ ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ?

ಎ) ಸವರ್ಣ ದೀರ್ಘ ಸಂಧಿ ಬಿ) ಅನುನಾಸಿಕ ಸಂಧಿ ಸಿ) ಜಶ್ತ್ವ ಸಂಧಿ ಡಿ) ಯಣ್ ಸಂಧಿ

35. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಚಿಹ್ನೆ ___

ಎ) ವಿವರಣಾತ್ಮಕ ಚಿಹ್ನೆ ಬಿ) ಆವರಣ ಚಿಹ್ನೆ ಸಿ) ಉದ್ಧರಣ ಚಿಹ್ನೆ ಡಿ) ವಾಕ್ಯವೇಷ್ಟನ ಚಿಹ್ನೆ

36. 'ನಿನಗಾಗಿ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.

ಎ) ತದ್ಧಿತಾಂತನಾಮ ಬಿ) ಕೃದಂತನಾಮ ಸಿ) ತದ್ಧಿತಾಂತಾವ್ಯಯ ಡಿ) ಕೃದಂತಾವ್ಯಯ

37. ಕೆಳಗಿನ ನಾಮಪದಗಳಲ್ಲಿ ಅನ್ವರ್ಥನಾಮ ಪದಕ್ಕೆ ಉದಾಹರಣೆ _____

ಎ) ವಿಜ್ಞಾನಿ ಬಿ) ಶಂಕರ ಸಿ) ಐವತ್ತು ಡಿ) ದೇಶ

38. ಯಾವುದಾದರೊಂದು ಕ್ರಿಯೆ ನಡೆದ ಹೇಳುವಂತಹ ಅವ್ಯಯ _____

ಎ) ಅನುಕರಣಾವ್ಯಯ ಬಿ) ಕ್ರಿಯಾರ್ಥಕಾವ್ಯಯ ಸಿ) ಸಂಬಂಧಾರ್ಥಕಾವ್ಯಯ ಡಿ) ಸಾಮಾನ್ಯಾವ್ಯಯ

39. ಹಿಂದೂಸ್ಥಾನೀ ಭಾಷೆಯಿಂದ ಕನ್ನಡಕ್ಕೆ ಬಂದಿರುವ ಪದ ____

ಎ) ತಕರಾರು ಬಿ) ಕಾಗದ ಸಿ) ಬಂದೂಕು ಡಿ) ಕಾರು

40. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂತಹ ವಾಕ್ಯ ____ಎನ್ನುವರು.

ಎ) ಮಿಶ್ರವಾಕ್ಯ ಬಿ) ಸಂಯೋಜಿತ ವಾಕ್ಯ ಸಿ) ಸಾಮಾನ್ಯ ವಾಕ್ಯ ಡಿ) ಪ್ರಶ್ನಾರ್ಥಕ ವಾಕ್ಯ

Use E-Papers, Save Trees
above line hide when print out

**ಐ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:** **4x1=4**

41. ಈ ಬೆಕ್ಕು : ಗಮಕ ಸಮಾಸ : : ಕಡೆಗಣ್ಣು : __________

42. ಸುಧಾ : ಸೊದೆ : : ವಿಜ್ಞಾಪನೆ : __________

43. ತಿನ್ನನು : ನಿಷೇಧಾರ್ಥಕ : : ತಿನ್ನೋಣ : __________

44. ಪ್ರಥಮಾ ವಿಭಕ್ತಿ : ಕರ್ತರ್ಥ : : ಸಪ್ತಮೀ ವಿಭಕ್ತಿ : __________

**ಒ. 45. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರು ಬರೆಯಿರಿ:** **1x3=3**

ವೀರಕೌರವರಾಯನೇ ದಾ
ತಾರನಾತನ ಹಗೆಯ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ

**ಅಥವಾ**

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

**ಓ. 46. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿ:** **1x3=3**

ಶ್ರೀ ರಂಗರಾಜ ಚರಣಾಂಬುಜ ಮೂಲದಾಸಃ

**ಅಥವಾ**

ನುಡಿದರೆ ಮುತ್ತಿನ ಹಾರದಂತಿರಬೇಕು.

**ಭಾಗ- 'ಸಿ'**

**ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ- 13 ಅಂಕಗಳು**

**ಔ. 47. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೊಂದನ್ನು ವಿಸ್ತರಿಸಿ ಬರೆಯಿರಿ:** **1x3=3**

* ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು
* ಮನಸ್ಸಿದ್ದರೆ ಮಾರ್ಗ
* ದುಡಿಮೆಯೇ ದುಡ್ಡಿನ ತಾಯಿ

**ಅಂ. 48. ಈ ಕೆಳಗಿನ ವಿಷಯಗಳನ್ನು ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆ:** **1x5=5**

- ಗಣಕಯಂತ್ರದ ಮಹತ್ವ
- ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ
- ರಾಷ್ಟ್ರೀಯ ಭಾವೈಕ್ಯತೆ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ

**ಅಃ. 49.** ನಿಮ್ಮನ್ನು ಚಂದನ/ಚೇತನ್ , ಸರ್ಕಾರಿ ಪ್ರೌಢಶಾಲೆ, ಹೊಳೆನರಸೀಪುರದ ವಿದ್ಯಾರ್ಥಿ ಎಂದು ಭಾವಿಸಿಕೊಂಡು **'ಕನ್ನಡ ವ್ಯಾಕರಣ ದೀಪಿಕೆ'** ಪುಸ್ತಕವನ್ನು ಕಳುಹಿಸಿಕೊಡುವಂತೆ ಕೋರಿ ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು ಇವರಿಗೆ ಪತ್ರ ಬರೆ. **ಅಥವಾ**

ನಿಮ್ಮನ್ನು ಸರಳ/ಸುರೇಶ್, 10ನೇ ತರಗತಿ ,ಚೇತನ ಪ್ರೌಢಶಾಲೆ, ಉಡುಪಿಯ ವಿದ್ಯಾರ್ಥಿ ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿ ಕುರಿತು ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ. **1x5=5**

ಹಾಸನ ಜಿಲ್ಲಾ ಹೊಳೆನರಸೀಪುರ ತಾ ಕನ್ನಡ ಶಿಕ್ಷಕರ ವೇದಿಕೆ

Use E-Papers, Save Trees
above line hide when print out